ವಿಷಯ:- ಬಿಜಾಪುರ ಜಿಲ್ಲೆಯ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು.

5(89)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳು ಇವೆ ; (ವಿವರ ನೀಡುವುದು).

ಆ) ಸದರಿ ಕೇಂದ್ರಗಳಿಗೆ ಮಂಜೂರಾಗಿರುವ ಒಟ್ಟು ವೈದ್ಯರ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಬಿಜಾಪುರ ಜಿಲ್ಲೆಯಲ್ಲಿ 15 ಸ್ಥಳಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಿವೆ. ವಿವರದ ಪ್ರತಿ ಲಗತ್ತಿಸಿದೆ.

ಆ) ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒಟ್ಟು 38 ವೈದ್ಯರ ಹುದ್ದೆ ಮಂಜೂರಾಗಿವೆ. ಅದರಲ್ಲಿ 29 ವೈದ್ಯರ ಹುದ್ದೆಗಳು ಭರ್ತಿ ಮಾಡಲಾಗಿದ್ದು ಉಳಿದ 9 ವೈದ್ಯರ ಹುದ್ದೆಗಳು ಖಾಲಿ ಇರುತ್ತದೆ. ವಿವರ ಲಗತ್ತಿಸಿದೆ.

ಬಿಜಾಪುರ ಜಿಲ್ಲೆಯ ಸಮುದಾಯ ಆರೋಗ್ಯ ಕೇಂದ್ರಗಳಿಗೆ 38 ವೈದ್ಯರ ಹುದ್ದೆಗಳು ಮಂಜೂರಾಗಿರುತ್ತದೆ. ಅವುಗಳಲ್ಲಿ 9 ವೈದ್ಯರ ಹುದ್ದೆ ಖಾಲಿ ಇರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಸ್ಥಳ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿ-ಸುತ್ತಿರುವ ಸಂಖ್ಯೆ	ಖಾಲಿ
1	2	3	4	5	6
1.	ಬಸವನಬಾಗೇವಾಡಿ	ಬಸವನಬಾಗೇವಾಡಿ	2	2	-
2.	ಮುದ್ದೆಬಿಹಾಳ	ಮುದ್ದೆಬಿಹಾಳ	2	2	-
3.	ಮುದ್ದೆಬಿಹಾಳ	ತಾಳಿಕೋಟೆ	2	1	1
4.	ಇಂಡಿ	ಇಂಡಿ	3	2	1

1	2	3	4	5	6
5.	ಇಂಡಿ	ತಡವಲಗ	1	1	-
6.	ಸಿಂಧಗಿ	ಸಿಂಧಗಿ	3	1	2
7.	ಜಮಖಂಡಿ	ಜಮಖಂಡಿ	3	3	-
8.	ಜಮಖಂಡಿ	ರಬಕವಿಬನಹಟ್ಟಿ	1	1	-
9.	ಮುಧೋಳ	ಮುಧೋಳ	3	2	1
10.	ಮುಧೋಳ	ಮಹಾಲಿಂಗಪುರ	2	1	1
11.	ಬೀಳಗಿ	ಬೀಳಗಿ	2	2	-
12.	ಹುನಗುಂದ	ಹುನಗುಂದ	3	2	1
13.	ಹುನಗುಂದ	ಇಳಕಲ್	5	3	2
14.	ಬಾದಾಮಿ	ಬಾದಾಮಿ	4	4	-
15.	ಬಾದಾಮಿ	ಗುಳೇದಗುಡ್ಡ	2	2	-
			38	29	9

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಸಮುದಾಯ ಆರೋಗ್ಯ ಕೇಂದ್ರದ ವೈದ್ಯರ ಬಗ್ಗೆ ಕೇಳಿದ್ದೇನೆ. ಇನ್ನೂ 9 ಜಾಗದಲ್ಲಿ ಖಾಲಿ ಇದೆ ಎಂದು ತಾವು ತೋರಿಸಿದ್ದೀರಿ. ಬಹುಶಃ ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತೀರಾ ಎನ್ನುವುದು ಒಂದನೇ ಪ್ರಶ್ನೆ. ಎರಡನೇ ಪ್ರಶ್ನೆ ಇಡೀ ರಾಜ್ಯದ ಸಮಸ್ಯೆ ಇದು. ಬಹಳ ಕಡೆ ಗ್ರಾಮೀಣ ಪ್ರದೇಶದಲ್ಲಿ ಪಿ.ಹೆಚ್.ಸಿ. ಮೆಡಿಕಲ್ ಸಬ್‌ಸೆಂಟರ್‌ಗಳನ್ನು ತೆಗೆದು ವೈದ್ಯಕೀಯ ಸವಲತ್ತುಗಳನ್ನು ಕೊಡಬೇಕೆಂದಿದ್ದರೂ ಬಹಳ ವೈದ್ಯರು ಆಸ್ಪತ್ರೆಗೆ ಹೋಗದೇ ಇರುವುದರಿಂದ ತೊಂದರೆಯಾಗಿದೆ. ಇದರಿಂದ ಜನರಿಗೂ ಕೂಡ ತೊಂದರೆಯಾಗಿದೆ. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಎಂ.ಬಿ.ಬಿ.ಎಸ್. ಪದವೀಧರರರಿಗೆ ಪೋಸ್ಟಿಂಗ್ ಕೊಟ್ಟು ಮೂರು ವರ್ಷ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವಂತೆ ಕಾನೂನನ್ನು ತಂದಾದರೂ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವಂತೆ ಮಾಡಲು ತಾವು ಆಲೋಚನೆ ಮಾಡಿದ್ದೀರೋ?

ಶ್ರೀ ಹೆಚ್.ಸಿ. ಮಹದೇವಪ್ಪ:- ಬಿಜಾಪುರ ಜಿಲ್ಲೆಯಲ್ಲಿ 15 ಆರೋಗ್ಯ ಸಮುದಾಯ ಭವನಗಳಿವೆ. ಅದರಲ್ಲಿ ಸ್ಯಾಂಕ್ಷನ್ ಆಗಿರುವ ವೈದ್ಯರ ಹುದ್ದೆಗಳು 38. 38ರಲ್ಲಿ 29 ಜನ ಕೆಲಸ ಮಾಡುತ್ತಿದ್ದು 9 ಹುದ್ದೆಗಳು ಖಾಲಿ ಇವೆ. 15 ಸಮುದಾಯ ಆರೋಗ್ಯ ಭವನಗಳಲ್ಲಿ 9 ಹುದ್ದೆಗಳು ಖಾಲಿ ಇವೆ. ಅದನ್ನು ತುಂಬುವುದಕ್ಕೋಸ್ಕರ ಲೋಕಸೇವಾ ಆಯೋಗದ ಮುಖಾಂತರ 400 ವೈದ್ಯರನ್ನು ಆಯ್ಕೆ ಮಾಡಿದ್ದೇವೆ. 200 ಜನರನ್ನು ಅಡಿಷನಲ್ ಲಿಸ್ಟ್‌ನಲ್ಲಿ ಮಾಡಿದ್ದೇವೆ. 400 ಜನರ ಪೈಕಿ 215 ಜನರ ಸರ್ಟಿಫಿಕೇಟ್ ವೆರಿಫಿಕೇಷನ್ ಕೆಲಸ ಸಂಪೂರ್ಣವಾಗಿದ್ದು ಇನ್ನು 181 ಜನರ

ವೆರಿಫೀಕೇಷನ್ಸ್ ಆಗಬೇಕಾಗಿದೆ. ಸರ್ಟಿಫಿಕೇಟ್ ವೆರಿಫಿಕೇಷನ್ ಆಗುವವರೆಗೆ ಲೋಕಸೇವಾ ಆಯೋಗ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸುವುದಿಲ್ಲ. ಪದೇಪದೇ ನಾನು ಮನವಿ ಮಾಡಿದ್ದೇನೆ. ಹೆಚ್ಚು ಕೆಲಸ ಈಗ ಆಗಿದೆ. ಮತ್ತು ಈಗಾಗಲೇ ಕಾನೂನಿನಲ್ಲಿ ನಾವು ಅಳವಡಿಸಿದ್ದೇವೆ; ಹೊಸದಾಗಿ ಆಯ್ಕೆಯಾದ ವೈದ್ಯರು ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ 5 ವರ್ಷ ಸೇವೆ ಸಲ್ಲಿಸಬೇಕು ಎಂದು. ಹೊಸದಾಗಿ ಕಾಯಿದೆಯನ್ನು ತರಬೇಕಾದ ಅಗತ್ಯ ಇಲ್ಲ. ಪಟ್ಟಿಯನ್ನು ಶೀಘ್ರವಾಗಿ ಪಡೆದುಕೊಂಡು ನೇಮಕ ಮಾಡುತ್ತೇವೆ. ಜಿಲ್ಲಾಧಿಕಾರಿಗಳಿಗೆ ಮುಖ್ಯ ಕಾರ್ಯದರ್ಶಿಗಳಿಗೆ ಈಗಾಗಲೇ ಟೆಲೆಕ್ಸ್ ಕಳುಹಿಸಿ ಆದಷ್ಟು ಜಾಗ್ರತೆ ಗ್ರಾಮೀಣ ಪ್ರದೇಶದ ವೈದ್ಯರ ಹುದ್ದೆಯನ್ನು ತುಂಬುವುದಕ್ಕೆ ಸರ್ಟಿಫಿಕೇಟ್ಸ್ ವೆರಿಫಿಕೇಷನ್ ಕೆಲಸ ಸಂಪೂರ್ಣಗೊಳಿಸಿ ಶೀಘ್ರವಾಗಿ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

11.00 ಎಎಂ

ಇದು ಬಂದ ತಕ್ಷಣ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಈಗ ನಾನು ತಮ್ಮಲ್ಲಿ ನಿರ್ದಿಷ್ಟವಾಗಿ ಕೇಳುತ್ತಿದ್ದೇನೆ. ಈ ವೆರಿಫಿಕೇಷನ್ ಎಷ್ಟು ದಿವಸದಿಂದ ನಡೆಯುತ್ತಿದೆ? ಇನ್ನು ಎಷ್ಟು ವರ್ಷ ನಡೆಯಬೇಕು?

ಡಾ: ಎಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ವೆರಿಫಿಕೇಷನ್ ಏನೂ ವರ್ಷಾನುಗಟ್ಟಲೆ ಆಗುವುದಿಲ್ಲ. ಕನಿಷ್ಟ ಕೆಲವಾರು ತಿಂಗಳಾದರೂ ಬೇಕಾಗುತ್ತದೆ. ಈಗ ಕೋರ್ಟಿನವರು ಬಹಳ ಬಿಗಿಯಾದಂಥ ಕಾನೂನಿನ ಕ್ರಮವನ್ನು ಹಾಕಿಕೊಳ್ಳುವುದರಿಂದ ಅಧಿಕಾರಿಗಳೂ ಕೂಡ ಕೆಳಮಟ್ಟದಲ್ಲಿ cast certificate verification ಮಾಡುವಂಥ ಸಂದರ್ಭದಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿದ ಏಕಾಏಕಿ ಕೊಡತಕ್ಕಂಥಾದ್ದು ಕಷ್ಟ ಇದೆ. ಈಗಾಗಲೇ 215 ಜನರಿಗೆ ಅವರು ವೆರಿಫಿಕೇಷನ್ ಮಾಡಿ ಕೊಟ್ಟಿದ್ದಾರೆ. ಮತ್ತು 281 ಜನರದ್ದು ವೆರಿಫಿಕೇಷನ್ ಹಂತದಲ್ಲಿದೆ. ಆದಷ್ಟು ಜಾಗ್ರತೆ ಕೊಡಬೇಕೆಂದು ಹೇಳಿದ್ದೇವೆ. ಕನಿಷ್ಟ ಮುಂದಿನ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಅದನ್ನು ಪಡೆದುಕೊಂಡು....

ಅಧ್ಯಕ್ಷರು:- ಒಂದು ನಿಮಿಷ. ವೆರಿಫಿಕೇಷನ್ ಪ್ರಶ್ನೆ ಬಂದಾಗ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಆಯ್ಕೆ ಮಾಡಿದಾಗಲೂ ಇದೇ ಸಮಸ್ಯೆ ಬಂತು. ಈ ಸಮಸ್ಯೆಯ ತೀವ್ರತೆಯನ್ನು ಅರ್ಥಮಾಡಿಕೊಂಡು ಆದಷ್ಟು ಬೇಗ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಇನ್ನೊಂದು ಸಲ ಇದೇ ಪ್ರಶ್ನೆ ಬಂದಾಗ ವೆರಿಫಿಕೇಷನ್ ತಡವಾಯಿತು. ವೆರಿಫಿಕೇಷನ್ ನಿರೀಕ್ಷಣೆ ಮೇರೆಗೆ ಪ್ರೊವಿಷನಲ್ ಆಗಿ ಕೊಟ್ಟರು. ವೆರಿಫಿಕೇಷನ್ ಆಗಿ ಡಿಸ್‌ಕ್ವಾಲಿಫೈ ಆದರೆ ಅಂತಹವರನ್ನು ತೆಗೆದುಹಾಕಬಹುದು. ಆ ಆಧಾರದ ಮೇಲೆ 700-800 ಜನರನ್ನು ಒಂದು ಸಲ ಅದೇ ರೀತಿಯಾಗಿ ಮಾಡಿದ್ದಾರೆ. ದಯವಿಟ್ಟು ತಾವು ಏಕೆ ಇದನ್ನು ಉಪಯೋಗಿಸಬಾರದು.

MR. SPEAKER:- You can consider that.

ಡಾ. ಎಚ್.ಸಿ. ಮಹದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಪ್ರಯತ್ನಗಳನ್ನು ಕೂಡ ನಾವು ಮಾಡಿದ್ದೇವೆ. ಲೋಕಸೇವಾ ಆಯೋಗದ ಅಧ್ಯಕ್ಷರ ಜತೆಯಲ್ಲಿ ನಾನು ಮಾತನಾಡಿದ್ದೇನೆ. ಆದರೆ ನ್ಯಾಯಾಲಯ ಅತ್ಯಂತ ಬಿಗಿಯಾದಂಥ ಕ್ರಮವನ್ನು ತೆಗೆದುಕೊಂಡಮೇಲೆ ಅಧಿಕಾರಿಗಳು ಇದನ್ನು ಕೊಡುವುದಕ್ಕೆ ಸ್ವಲ್ಪ ಹೆದರುತ್ತಿದ್ದಾರೆ. ಆದರೂ ಸಮಸ್ಯೆಯ ತೀವ್ರತೆಯನ್ನು ಅರ್ಥಮಾಡಿಕೊಂಡು ಎಲ್ಲಾ ಪ್ರಯತ್ನವನ್ನು ಕೂಡ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದುದು, ಡಾಕ್ಟರ್ ಆಗುವುದಕ್ಕೆ ಅರ್ಹತೆ ಇರುತ್ತದೆ. Particular category ಬರುವುದಕ್ಕೆ whether he is qualified or not ಎಂಬುದಕ್ಕೆ ಸಂಬಂಧಪಟ್ಟಹಾಗೆ provisional appointment ಕೊಡಿ. Supposing he does not fit into that category, you remove him. You can consider that proposal. You can discuss with Officers and come back.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಅಧ್ಯಕ್ಷರೇ, ಜನರಲ್ ಮೆರಿಟ್‌ಗೆ ವೆರಿಫಿಕೇಷನ್ ಇಲ್ಲದೇ ಕೊಡಬಹುದು.

ಅಧ್ಯಕ್ಷರು:- ಜನರಲ್ ಮೆರಿಟ್‌ಗೆ ಏನೂ ವೆರಿಫಿಕೇಷನ್ ಇಲ್ಲ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್:- ಅದನ್ನಾದರೂ ಮಾಡಬಹುದಲ್ಲಾ?

ಶ್ರೀ ಎಚ್.ಸಿ. ಮಹದೇವಪ್ಪ:- ಆದರೆ ಸೀನಿಯಾರಿಟಿ ಹೋಗುತ್ತದೆ ಎಂದು ಬೇರೆಯವರು ಅಬ್ಜೆಕ್ಟ್ ಮಾಡುತ್ತಾರೆ. ಎಲ್ಲಾ ವಿಚಾರಗಳನ್ನು ನಾನು ಚರ್ಚೆ ಮಾಡಿದ್ದೇನೆ.

MR. SPEAKER:- You may kindly discuss with your Officers.

ವಿಷಯ:- ಕೊಳವೆಬಾವಿ ಕೊರೆಯುವ ಯಂತ್ರಗಳ ದುರಸ್ತಿ.

6(142)

ಶ್ರೀ ಹೆಚ್. ಶಿವಪ್ಪ (ಹರಿಹರ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಿಭಾಗದಲ್ಲಿರುವ ಒಟ್ಟು ಕೊಳವೆಬಾವಿ ಕೊರೆಯುವ ಯಂತ್ರಗಳೆಷ್ಟು ಹಾಗೂ ಕೆಟ್ಟುನಿಂತಿರುವ ಯಂತ್ರಗಳೆಷ್ಟು;

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ, ವಿಫಲವಾದ ಬಾವಿಗಳೆಷ್ಟು ಮತ್ತು ದುಸ್ಥಿತಿಯಲ್ಲಿರುವ ಬಾವಿಗಳೆಷ್ಟು;

(ಕಳೆದ ಮೂರು ವರ್ಷಗಳ ವಿವರ ನೀಡುವುದು)